ಅನುಮತಿ ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಈಗಾಗಲೇ ವಿನಂತಿಸಿಕೊಂಡಿದ್ದೇನೆ. ಅದು ಮಾನ್ಯ ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟಿರುವಂತಹ ವಿಚಾರವಾಗಿದೆ. ತಮ್ಮೆಲ್ಲರ ಸಹಕಾರದಿಂದ ಅದಕ್ಕೆ ಅನುಮತಿಯನ್ನು ನಾನು ಪಡೆದುಕೊಳ್ಳುತ್ತೇನೆ. ದ್ವಿಚಕ್ರ ವಾಹನಗಳ ಸಂಖ್ಯೆನ್ನು ಕಡಿಮೆ ಮಾಡುವುದರ ಬಗ್ಗೆ ಸರ್ಕಾರ ಸಾಕಷ್ಟು ಆಲೋಚನೆಗಳನ್ನು ಮಾಡುತ್ತಿರುವಂತಹ ವಿಚಾರ ತಮಗೆಲ್ಲರಿಗೂ ಗೊತ್ತೇ ಇದೆ. ಬೆಂಗಳೂರು ಸುತ್ತಮುತ್ತ ಇಎಲ್‌ಆರ್‌ಟಿಎಸ್ ಎಂಬ ಹಗುರ ರೈಲು ಸಂಚಾರವನ್ನು ಆರಂಭಿಸುವ ಪ್ರಸ್ತಾವನೆ ಈಗ ಸರ್ಕಾರದ ಮುಂದಿದೆ. ಮೋನೋ ಬಸ್ಸುಗಳ ಸಂಚಾರ ಆರಂಭಿಸುವ ಬಗ್ಗೆ ಪ್ರಸ್ತಾವನೆ ಕೂಡ ಸರ್ಕಾರದ ಮುಂದಿದೆ. ಈ ಯೋಜನೆಗಳೆಲ್ಲವೂ ಕೂಡ ತಕ್ಷಣವೇ ಬರುವಂತಹ ಸಾಧ್ಯತೆಗಳಿವೆ. ಇದೆಲ್ಲಾ ಯೋಜನೆಗಳು ಕಾರ್ಯಗತವಾದಾಗ ಪ್ರಯಾಣಿಕರ ಒತ್ತಡವಾಗಲೀ, ದ್ವಿಚಕ್ರ ವಾಹನಗಳು ಒತ್ತಡವಾಗಲೀ ಕಡಿಮೆಯಾಗುವಂತಹ ಸಾಧ್ಯತೆ ಇದೆ ಎಂದು ತಮ್ಮ ಮುಖಾಂತರವಾಗಿ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ವಾಣಿಜ್ಯ ಮಳಿಗೆಗಳು

149 (1438) ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ನಿಲ್ದಾಣದ ವಾಣಿಜ್ಯ ಮಳಿಗೆ ಪರವಾನಗಿದಾರರ ಸಂಘದವರು ಹಾಲಿ ನಿಯಮಾವಳಿಗಳನ್ನು ಮಾರ್ಪಾಡು ಮಾಡಬೇಕೆಂದು ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಸರ್ಕಾರದ ನಿಲುವೇನು?

ಇ) ಹಾಲಿ ನಿಯಾಮಾವಳಿಗಳನ್ನು ಯಾವಾಗ ಮಾರ್ಪಾಡು ಮಾಡಲಾಗುವುದು?:

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಹೌದು.

ಆ) ಬೇಡಿಕೆ ಸೂಕ್ತವಾಗಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ನಿಲ್ದಾಣದ ವಾಣಿಜ್ಯ ಮಳಿಗೆ ಪರವಾನಿಗೆದಾರರ ಸಂಘದವರು ಹಾಲಿ ನಿಯಮಾವಳಿಗಳನ್ನು ಮಾರ್ಪಾಡು ಮಾಡಬೇಕೆಂದು ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಎಂದು ಕೇಳಿದ್ದಕ್ಕೆ ಹೌದು ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇಂದು ರಾಜ್ಯದಲ್ಲಿರುವ ಎಲ್ಲಾ ಬಸ್ ನಿಲ್ದಾಣದ ಹೋಟೆಲ್‌ಗಳಲ್ಲಿ ಕಳಪೆ ಗುಣಮಟ್ಟದ ತಿಂಡಿ ಪದಾರ್ಥಗಳನ್ನು ಕೊಡುತ್ತಿದ್ದಾರೆ. ಎದುರುಗಡೆ ಅಂಗಡಿಯವರು ಐವತ್ತು ಸಾವಿರ ರೂಪಾಯಿ ಬಾಡಿಗೆ ಕೊಟ್ಟುಕೊಂಡು ಹೋಗುತ್ತಿದ್ದರೆ ನಮಗೆ ಒಂದು ಲಕ್ಷದವರೆಗೆ ಬಾಡಿಗೆ ಕೊಡಬೇಕಾಗಿದೆ. ಆದ್ದರಿಂದ ನಾವು ಎಂಥ ಗುಣಮಟ್ಟವನ್ನು ಕಾಪಾಡಿಕೊಂಡು

ಹೋಗಲು ಸಾಧ್ಯವೆಂದು ಕೇಳಿರುತ್ತಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ತಿಳಿಸಬೇಕು. ಎರಡನೆಯದಾಗಿ, ಈ ಬೇಡಿಕೆ ಪರಿಶೀಲನೆಗೆ ಸೂಕ್ತವಾಗಿಲ್ಲವೆಂದು ಹೇಳಿದ್ದಾರೆ. ಇದಕ್ಕೆ ಸಹ ಉತ್ತರ ಕೊಡಿ. ಹಾಲಿ ನಿಯಾಮಾವಳಿಗಳನ್ನು ಯಾವಾಗ ಮಾರ್ಪಾಡು ಮಾಡಲಾಗುವುದು ಎಂಬುದಕ್ಕೆ ಇದು ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ ಏಕೆ ಉದ್ಭವಿಸುವುದಿಲ್ಲ ? ಅವರುಗಳ ಬೇಡಿಕೆಗಳು ಈಗಾಗಲೇ ನ್ಯಾಯಾಲಯದಲ್ಲಿದ್ದು, ನಮಗೆ 20 ಇಲ್ಲವೆ 10 ಪರ್‌ಸೆಂಟ್ ಬಾಡಿಗೆಯನ್ನು ಕಡಿಮೆ ಮಾಡಿಕೊಡಿ ನಾವು ಗುಣಮಟ್ಟದ ತಿಂಡಿ ಪದಾರ್ಥಗಳನ್ನು ಒದಗಿಸುವುದಾಗಿ ಹೇಳಿದ್ದಾರೆ. ಏಕೆ ಇವರಿಗೆ ಕಡಿಮೆ ಮಾಡಿಕೊಡಲು ಆಗುವುದಿಲ್ಲ. ಇವುಗಳ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್.ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದೇವೆ. ಬಸ್ ನಿಲ್ದಾಣಗಳು, ರೈಲ್ವೆ ಮತ್ತು ವಿಮಾನ ನಿಲ್ದಾಣಗಳು ಇಲ್ಲಿ ವಾಣಿಜ್ಯ ಮಳಿಗೆಗಳನ್ನಾಗಲಿ, ಹೋಟೆಲ್‌ಗಳನ್ನಾಗಲಿ ಪ್ರಾರಂಭ ಮಾಡಬೇಕಾಂಥ ಸಂದರ್ಭದಲ್ಲಿ ಆ ಸಂಸ್ಥೆಗಳಿಗೆ ಸಂಬಂಧ ಪಟ್ಟಂತೆ ಸಮಿತಿಗಳನ್ನು ರಚನೆ ಮಾಡಿರುತ್ತೇವೆ. ಇಲ್ಲಿ ವಾಣಿಜ್ಯ ಮಳಿಗೆಗಳನ್ನಾಗಲಿ, ಹೋಟೆಲ್‌ಗಳನ್ನಾಗಲಿ ಪ್ರಾರಂಭ ಮಾಡಲು ನಿಯಮವೇನಿದೆ ಅದರಂತೆ ತೀರ್ಮಾನ ತೆಗೆದುಕೊಳ್ಳುತ್ತೇನೆ. ಆದರೆ ಹೋಟೆಲ್ ಮಾಲೀಕರು ನಾವು ಅವರಿಗೆ ಗುತ್ತಿಗೆ ಆಧಾರದ ಮೇಲೆ ಅವಕಾಶವನ್ನು ಕೊಡುವಂಥ ಸಂದರ್ಭದಲ್ಲಿ ಹೆಚ್ಚಾಗಿ ಹಣವನ್ನು ಆಕ್ಷನ್‌ನಲ್ಲಿ ಭಾಗಿಗಳಿಗೆ ಅವುರಗಳೆ ತೆಗೆದುಕೊಂಡಿರುವಂಥ ಸಂದರ್ಭದಲ್ಲಿ ಹತ್ತಾರು ಪ್ರಕರಣಗಳಲ್ಲಿ ಅವರು ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹಾಕಿಕೊಂಡಿದ್ದಾರೆ. ಆದ್ದರಿಂದ ಬಾಡಿಗೆ ಕಡಿಮೆ ಮಾಡುವ ಬಗ್ಗೆ ಕೋಟಿ ಅವರು ನ್ಯಾಯಾಲಯಕ್ಕೆ ಹೋಗಿರುವುದು ಅವರುಗಳ ತಪ್ಪು ಎಂದು ಹೇಳುವುದಿಲ್ಲ ಅಥವಾ ನಮ್ಮ ಇಲಾಖೆಯವರದ್ದು ತಪ್ಪು ಎಂದು ಹೇಳುವುದಿಲ್ಲ. ಒಂದು ಸಲ ಹೋಟೆಲ್ ಪ್ರಾರಂಭ ಮಾಡುವುದಕ್ಕೆ ಟೆಂಡರ್ ಮೂಲಕ ನಾವು ದರಪಟ್ಟಿ ಮತ್ತು ಬಾಡಿಗೆ ವಿಧಿಸುವ ಬಗ್ಗೆ ಕೋರಿದಾಗ ಅವರುಗಳೆ ಹೆಚ್ಚಾಗಿ ಬಾಡಿಗೆಯನ್ನು ಕೊಡುತ್ತೇವೆಂದು ಮುಂದೆ ಬಂದಾಗ ನಾವು ಬೇಡ ಎಂದು ಹೇಳುವ ಸ್ಥಿತಿಯಲ್ಲಿ ಇರಲು ಸಾಧ್ಯವಿಲ್ಲ. ತಿಂಡಿ ಪದಾರ್ಥಗಳನ್ನು ಕಳಪೆದರ್ಜೆಯದ್ದು ಕೊಡುತ್ತಿದ್ದಾರೆ ಎಂದು ಹೇಳುವುದಿದ್ದರೆ ನಮ್ಮ ಸಂಸ್ಥೆಯಲ್ಲಿ ಕಾನೂನು ಇದೆ, ಅದನ್ನು ಬಳಕೆ ಮಾಡಿಕೊಂಡು ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಉತ್ತಮ ದರ್ಜೆಯ ತಿಂಡಿ ಪದಾರ್ಥಗಳನ್ನು ಒದಗಿಸಲು ಏರ್ಪಾಟು ಮಾಡಬಹುದು. ಆದರೆ ತಾವು ಕಳಪೆ ದರ್ಜೆಯ ಪದಾರ್ಥಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ಗಮನಕ್ಕೆ ತಂದರೆ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ನಮ್ಮ ಸಂಸ್ಥೆಗೆ ಸಂಬಂಧಪಟ್ಟಂತೆ ಹೋಟೆಲ್ ಮಾಲೀಕರುಗಳಾಗಲಿ, ಅಂಗಡಿ ಮಾಲೀಕರು ಗಳಾಗಲಿ ನಾವುಗಳು ಒಂದು ರೀತಿಯಲ್ಲಿ ವ್ಯಾವಹಾರಿಕವಾಗಿ ನಮ್ಮ ಸಂಸ್ಥೆಗೆ ಆದಾಯ ಬರುವಂತೆ ತಾವು ತೀರ್ಮಾನ ಮಾಡಿ ದರ ಮತ್ತು ಬಾಡಿಗೆಯನ್ನು ನಿಗದಿ ಮಾಡುತ್ತೇವೆ. ನಾವೇನು ನಿಗದಿ ಮಾಡುತ್ತೇವೆ ಅದಕ್ಕಿಂತ ಜಾಸ್ತಿ ಕೊಡಲು ಅವರುಗಳೆ ಮುಂದೆ ಬಂದರೆ ನಾವು ಬೇಡ ಎಂದು ಹೇಳಲು ಆಗುತ್ತದೆಯೇ? ಅವರುಗಳೆ ಸ್ವತಃ ಗುತ್ತಿಗೆ ಆಧಾರದ ಮೇಲೆ ಹೋಟೆಲ್‌ಗಳನ್ನು, ಮಳಿಗೆಗಳನ್ನು ಪಡೆದು ಈಗ ಬಾಡಿಗೆ ಜಾಸ್ತಿಯಾಗಿದೆಯೆಂದು ಮನವಿ ಕೊಟ್ಟರೆ ಅದನ್ನು ಕಡಿಮೆ ಮಾಡುವುದು ಸಮಂಜಸವಲ್ಲ. ಅನೇಕ ಪ್ರಕರಣಗಳಲ್ಲಿ ಮೊಕದ್ದಮೆಗಳು ನ್ಯಾಯಾಲಯದಲ್ಲಿ ಇರುವುದರಿಂದ ಅದರ ತೀರ್ಪು ಬರಬೇಕಾಗುತ್ತದೆ. ಜೊತೆಗೆ ನಮ್ಮ ಸಂಸ್ಥೆಯೂ ನಡೆಯಬೇಕಾಗುತ್ತದೆ. ಆದ್ದರಿಂದ ಇದನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : XXX ಇಲ್ಲಿ ತೀರ್ಮಾನವಾಗಲು ಇಪ್ಪತ್ತು ಇಪ್ಪತ್ತೈದು ವರ್ಷಗಳಾಗುತ್ತದೆ. ಅದ್ದರಿಂದ ಅವರನ್ನು ಕರೆದು ನೆಗೋಶಿಯೇಟ್ ಮಾಡಿ ಸೂಕ್ತವಾದ ರೀತಿಯಲ್ಲಿ ಪರಿಹರಿಸಿಕೊಡಬೇಕು.

ಅಧ್ಯಕ್ಷರು : ನ್ಯಾಯಾಲಯದ ಬಗ್ಗೆ ಅಷ್ಟೊಂದು ಹೀನವಾಗಿ ಮಾತನಾಡಬಾರದು. ಇದು ಸರಿಯಲ್ಲ. ಅವರು ಮಾತನಾಡಿದ ಪದಗಳನ್ನು ಕಡತದಿಂದ ತೆಗೆದು ಹಾಕಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ನಾನು ನ್ಯಾಯಾಲಯವನ್ನು ಖಂಡನೆ ಮಾಡುತ್ತಿಲ್ಲ. ಆದರೆ ಪ್ರಕರಣ ತೀರ್ಮಾನವಾಗಲು ಇಪ್ಪತ್ತು ಇಪ್ಪತ್ತೈದು ವರ್ಷಗಳಾಗುತ್ತವೆ.

MR. SPEAKER : I am very sorry you place remove those words you are accusing the entire judiciary. ಅವರು ನ್ಯಾಯಾಲಯದ ಬಗ್ಗೆ ಮಾತನಾಡಿದ ಪದಗಳನ್ನು ಕಡತದಿಂದ ತೆಗೆದು ಹಾಕಿ.

ಶ್ರೀ ಸಿ.ಆರ್.ಸಗೀರ್ ಅಹಮದ್ : ನ್ಯಾಯಾಲಯದಲ್ಲಿ ಇರುವ ಮೊಕದ್ದಮೆಯ ತೀರ್ಪು ವಿಳಂಬವಾಗುತ್ತದೆ ಎಂದು ಮಾನ್ಯ ಶಂಕರಲಿಂಗೇಗೌಡರಿಗೆ ಒಳ್ಳೆಯ ಮಾಹಿತಿ ಇದೆ. ಅದರ ಬಗ್ಗೆ ನಾನು ಏನನ್ನು ಹೇಳುವುದಿಲ್ಲ. ಅದರೆ ನನ್ನ ಕರ್ತವ್ಯವೇನೆಂದರೆ , ನ್ಯಾಯಾಲಯಗಳು ನೀಡುವ ತೀರ್ಪಿಗೆ ತಲೆಬಾಗಬೇಕಾಗುತ್ತದೆ. ನಾನು ಗೌರವದಿಂದ ನ್ಯಾಯಾಲಯವು ನೀಡುವ ತೀರ್ಪಿನಂತೆಯ ನಡೆದುಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಅವರನ್ನು ಕರೆದು ನೆಗೋಶಿಯೇಟ್ ಏಕೆ ಮಾಡಬಾರದು?

ಶ್ರೀ ಸಿ.ಆರ್.ಸಗೀರ್ ಅಹಮದ್ : ನ್ಯಾಯಾಲಯದಲ್ಲಿ ವಿಚಾರ ಇರುವಾಗ ಹೇಗೆ ನೆಗೋಷಿಯೇಟ್ ಮಾಡುತ್ತೀರಿ? ಒಂದು ವೇಳೆ ಅವರುಗಳೆ ಸ್ವತಃ ನ್ಯಾಯಾಲಯದಿಂದ ಮೊಕದ್ದಮೆಗಳನ್ನು ವಾಪಸ್ ಪಡೆದು ನಮ್ಮ ಜೊತೆ ಹೊಂದಾಣಿಕೆ ಮಾಡಿಕೊಂಡು ಮಾತುಕತೆಯಾಡಲು ಬಂದರೆ ಅಂಥ ಪ್ರಕರಣದ ಬಗ್ಗೆ ನಾನು ಆಲೋಚನೆ ಮಾಡುತ್ತೇನೆ .

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

XXX ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ